# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | : | 735 |
| ಉತ್ತರಿಸುವ ದಿನಾಂಕ | : | 21.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಕಾರ್ಮಿಕ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ವಿವಿಧ ವರ್ಗಗಳ ಕೈಗಾರಿಕೆ, ಸಂಸ್ಥೆಗಳು ಹಾಗೂ ಉದ್ಯೋಗಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಪ್ರಸ್ತುತ ಜಾರಿಯಲ್ಲಿರುವ ಕನಿಷ್ಠ ವೇತನದ ದರಗಳನ್ನು ಪರಿಷ್ಕರಿಸಲಾಗಿದೆಯೇ, ಹೌದಾದಲ್ಲಿ ಯಾವ ದಿನಾಂಕದಿಂದ ಜಾರಿಗೆ ಬರುವಂತೆ ಸರ್ಕಾರದ ಅಧಿಸೂಚನೆ ಹೊರಡಿಸಿದೆ; ವರ್ಗ-1 ವರ್ಗ-2 ಹಾಗೂ ವರ್ಗ-3 ನಗರ/ಪ್ರದೇಶಗಳ ಆಧಾರದ ಮೇಲೆ ಹಾಗೂ ಉದ್ಯೋಗ/ಕಾರ್ಮಿಕ ವರ್ಗವಾರು ನಿಗದಿಪಡಿಸಿರುವ ಕನಿಷ್ಠ ವೇತನದ ವಿವರಗಳನ್ನು ನೀಡುವುದು; | ದಿನಾಂಕ:22-05-2026 ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ:ಕಾಇ 411 ಎಲ್‌ಡಬ್ಲ್ಯೂಎ 2023 ರಲ್ಲಿ 84 ಅನುಸೂಚಿತ ಉದ್ದಿಮೆಗಳಿಗೆ ಅನ್ವಯವಾಗುವ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲಾಗಿದೆ. ಪರಿಷ್ಕೃತ ವೇತನ ದರಗಳು ಅಧಿಸೂಚನೆ ಹೊರಡಿಸಿದ ದಿನಾಂಕದಿಂದಲೇ ಜಾರಿಗೆ ಬರುತ್ತವೆ. |

ಅಪಾಯಕಾರಿಯಲ್ಲದ ಉದ್ದಿಮೆಗಳಿಗೆ ಅನ್ವಯವಾಗುವ ವಲಯವಾರು ಹಾಗು ಕೌಶಲ್ಯವಾರು ನಿಗದಿಪಡಿಸಿರುವ ಕನಿಷ್ಠ ವೇತನದ ವಿವರ:

| ಕೌಶಲ್ಯವಾರು ವಿವರ | ವಲಯ-1 | | ವಲಯ-2 | | ವಲಯ-3 | |
|---|---|---|---|---|---|---|
| | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| ಅತಿಕುಶಲ | 1196.69 | 31114.02 | 1087.90 | 28285.47 | 989.00 | 25714.07 |
| ಕುಶಲ | 1087.90 | 28285.47 | 989.00 | 25714.07 | 899.09 | 23376.43 |
| ಅರೆ ಕುಶಲ | 989.00 | 25714.07 | 899.09 | 23376.43 | 817.35 | 21251.30 |
| ಅಕುಶಲ | 899.09 | 23376.43 | 817.35 | 21251.30 | 743.05 | 19319.36 |

ಅತ್ಯಂತ ಅಪಾಯಕಾರಿ ಉದ್ದಿಮೆಗಳಿಗೆ ಅನ್ವಯವಾಗುವ ಕನಿಷ್ಠ ವೇತನದ ವಿವರಗಳು:

| ಕೌಶಲ್ಯವಾರು ವಿವರ | ವಲಯ-1 | | ವಲಯ-2 | | ವಲಯ-3 | |
|---|---|---|---|---|---|---|
| | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| ಅತಿಕುಶಲ | 1316.36 | 34225.42 | 1196.69 | 31114.02 | 1087.90 | 28285.47 |
| ಕುಶಲ | 1196.69 | 31114.02 | 1087.90 | 28285.47 | 989.00 | 25714.07 |
| ಅರೆ ಕುಶಲ | 1087.90 | 28285.47 | 989.00 | 25714.07 | 899.09 | 23376.43 |
| ಅಕುಶಲ | 989.00 | 25714.07 | 899.09 | 23376.43 | 817.35 | 21251.30 |

ಅಧಿಸೂಚನೆ ಸಂಖ್ಯೆ: ಕಾಇ 411 ಎಲ್‌ಡಬ್ಲ್ಯೂಎ 2023ನ್ನು ದಿನಾಂಕ:22-05-2026ಕ್ಕೆಸಂಬಂಧಿಸಿದಂತೆ ದಿನಾಂಕ:13.08.2026ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಕೇಂದ್ರ ಸರ್ಕಾರವು ವೇತನ ಸಂಹಿತೆ 2019 (Code on Wages-2019) ಜಾರಿಗೆ ತಂದ ನಂತರ ರಾಜ್ಯ ಕಾರ್ಮಿಕ ಇಲಾಖೆಯು ಕನಿಷ್ಠ ವೇತನ ದರಗಳ ಪರಿಷ್ಕರಣೆ ಕುರಿತು ದಿನಾಂಕ:22.05.2026 ರಂದು ಅಧಿಸೂಚನೆ ಹೊರಡಿಸಿರುವುದರಿಂದ ಅದರಲ್ಲಿನ ಅಂಶಗಳು ಕೇಂದ್ರ ಸರ್ಕಾರದ ಸಂಹಿತೆಗೆ ಅನುಗುಣವಾಗಿದೆಯೇ ಎಂಬುವುದರ ಬಗ್ಗೆ ಪರಿಶೀಲಿಸಲು ಮಾನ್ಯ ಉಪ

| | | |
|---|---|---|
| | | ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿದೆ. ಇದರನ್ವಯ ಅಧಿಕೃತ ಜ್ಞಾಪನ ಸಂಖ್ಯೆ: ಸಸಂಶಾ 06 ಸಿಎಸ್ ಸಿ 2026, ದಿನಾಂಕ:18.08.2026ರಲ್ಲಿ ಸಚಿವ ಸಂಪುಟ ಉಪಸಮಿತಿ ರಚಿಸಲಾಗಿದೆ. ಸಚಿವ ಸಂಪುಟದ ಉಪಸಮಿತಿಯ ಅಂತಿಮ ತೀರ್ಮಾನದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು. |
| ಆ | ರಾಜ್ಯದಲ್ಲಿ ಜಾರಿಯಲ್ಲಿರುವ ಕನಿಷ್ಠ ವೇತನವನ್ನು ನೆರೆಯ ರಾಜ್ಯಗಳ ಕನಿಷ್ಠ ವೇತನದೊಂದಿಗೆ ಹೋಲಿಸಿದಾಗ ಕಂಡುಬರುವ ವ್ಯತ್ಯಾಸವೇನು; ರಾಜ್ಯದಲ್ಲಿ ವರ್ಗ-1 ವರ್ಗ-2 ಹಾಗೂ ವರ್ಗ-3 ನಗರ/ಪ್ರದೇಶಗಳ ವರ್ಗೀಕರಣ ಮತ್ತು ಕನಿಷ್ಠ ವೇತನ ನಿಗದಿಪಡಿಸುವ ಮಾನದಂಡಗಳೇನು ಎಂಬುದರ ವಿವರ ನೀಡುವುದು; | ನೆರೆ ರಾಜ್ಯಗಳಲ್ಲಿ ಜಾರಿಯಲ್ಲಿರುವ ಕನಿಷ್ಠ ವೇತನದ ವಿವರಗಳು ಅಧಿಕೃತವಾಗಿ ಲಭ್ಯವಿರುವುದಿಲ್ಲ.<br><br>ದಿನಾಂಕ:22.05.2026ರ ಅಧಿಸೂಚನೆಯಲ್ಲಿ ವಲಯಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ:<br><br>**ವಲಯ-1:** ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು.<br><br>**ವಲಯ-2:** ರಾಜ್ಯದ ಇತರೆ ಮಹಾನಗರ ಪಾಲಿಕೆಗಳು ಹಾಗೂ ಎಲ್ಲಾ ಜಿಲ್ಲಾ ಕೇಂದ್ರಗಳು.<br><br>**ವಲಯ-3:** ವಲಯ-1 ಮತ್ತು 2 ರಲ್ಲಿ ನಮೂದಿಸಿದ ಪ್ರದೇಶಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಪ್ರದೇಶಗಳು.<br><br>ಕನಿಷ್ಠ ವೇತನ ನಿಗದಿಪಡಿಸಲು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ರೆಪ್ಟಕೋಸ್ ಬ್ರೆಟ್ ಕಂ.ಪ್ರಕರಣದಲ್ಲಿ ನೀಡಿರುವ ಮಾನದಂಡಗಳ ವಿವರ ಈ ಕೆಳಕಂಡಂತಿವೆ:<br><br>1. ಸಾಮಾನ್ಯ ವರ್ಗದ ಕುಟುಂಬವನ್ನು ಒಬ್ಬ ಗಳಿಸುವವರಿಗೆ - ಮೂರು ಉಪಯುಕ್ತ ಘಟಕಗಳಾಗಿ ಪರಿಗಣಿಸಬೇಕು. ಇಬ್ಬರು ವಯಸ್ಕರು, ಇಬ್ಬರು ಮಕ್ಕಳು. ಮಹಿಳೆ ಮತ್ತು ಹದಿಹರೆಯದ ಮಕ್ಕಳ ಗಳಿಕೆಯನ್ನು ಪರಿಗಣಿಸುವಂತಿಲ್ಲ.<br><br>2. ಒಬ್ಬ ಕಾರ್ಮಿಕನ ದೈನಂದಿನ ಜೀವನೋಪಾಯಕ್ಕೆ 2700 ಕ್ಯಾಲರಿಗಳ ಶಕ್ತಿಯ ಅವಶ್ಯಕತೆಯ ಪರಿಗಣನೆ.<br><br>3. ಒಬ್ಬ ಕಾರ್ಮಿಕನ ಕುಟುಂಬಕ್ಕೆ ವಾರ್ಷಿಕ 66 ಮೀಟರ್ ಗಳ ಬಟ್ಟೆಯ ಪರಿಗಣನೆ.<br><br>4. ಸರ್ಕಾರದ ವಸತಿ ಯೋಜನೆಗಳಡಿ ನಿಗದಿಪಡಿಸಿರುವ ಕನಿಷ್ಠವಾಸಸ್ಥಳಕ್ಕೆ ಪಾವತಿಸಬೇಕಾದ ಮನೆ ಬಾಡಿಗೆ. [ಕನಿಷ್ಠ 300 ರಿಂದ 400 ಚದರ ಅಡಿ]<br><br>5. ಇಂಧನ, ವಿದ್ಯುಚ್ಛಕ್ತಿ ಮತ್ತು ಇತರೆ ಮಿಸಲೇನಿಯಸ್ ಬಾಬ್ತು: ಆಹಾರ, ಬಟ್ಟೆ ಮತ್ತು ಬಾಡಿಗೆ ಮೊತ್ತದ ಮೇಲೆ ಶೇ. 20.<br><br>6. ಮಕ್ಕಳ ವಿದ್ಯಾಭ್ಯಾಸ, ವೈದ್ಯಕೀಯ, ಸಾಮಾಜಿಕ ಭದ್ರತೆ ಮತ್ತು ಮದುವೆ ಬಾಬ್ತು: ರೆಪ್ಟೋಕೋಸ್ ಬ್ರೆಟ್ ಪ್ರಕರಣದ ತೀರ್ಪಿನ ಅನುಸಾರ ಕನಿಷ್ಠ ವೇತನ ಲೆಕ್ಕಾಚಾರದ ಮೊತ್ತದ ಮೇಲೆ ಶೇ. 25. |

| | | |
|---|---|---|
| | | ಸದರಿ ಮಾನದಂಡಗಳನ್ವಯ ರಾಜ್ಯದಲ್ಲಿರುವ ಹದಿನಾರು ಕೇಂದ್ರಗಳಿಂದ ಆಹಾರ, ಬಟ್ಟೆ, ಮನೆ ಬಾಡಿಗೆ ದರಗಳು ಮತ್ತು ಇತರೆ ವೆಚ್ಚಗಳಿಗೆ ತಗುಲುವ ದರಗಳನ್ನು ಪರಿಗಣಿಸಿ ಕನಿಷ್ಠ ವೇತನ ದರಗಳ ಲೆಕ್ಕಚಾರ ಮಾಡಲಾಗಿರುತ್ತದೆ. |
| ಇ | ಕನಿಷ್ಠ ವೇತನ ಪರಿಷ್ಕರಣೆಯಿಂದ ರಾಜ್ಯದ ಕೈಗಾರಿಕೆಗಳು, ಗುತ್ತಿಗೆದಾರರು, ಖಾಸಗಿ ಸಂಸ್ಥೆಗಳು ಹಾಗೂ ಇತರ ಉದ್ಯೋಗದಾರರಿಗೆ ಉಂಟಾಗುತ್ತಿರುವ ಆರ್ಥಿಕ ಮತ್ತು ಆಡಳಿತಾತ್ಮಕ ತೊಂದರೆಗಳ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದರೆ, ಸರ್ಕಾರಕ್ಕೆ ಇದುವರೆಗೆ ಬಂದಿರುವ ಮನವಿಗಳು/ದೂರುಗಳ ಸಂಖ್ಯೆ ಎಷ್ಟು ಹಾಗೂ ಅವುಗಳ ಮೇಲೆ ಕೈಗೊಂಡಿರುವ ಕ್ರಮಗಳೇನು; | ಕನಿಷ್ಠ ವೇತನ ಪರಿಷ್ಕರಿಸಿ ಅಧಿಸೂಚನೆ ಹೊರಡಿಸಿದ ದಿನಾಂಕ:22.05.2026 ರಿಂದ ಸಚಿವ ಸಂಪುಟ ಸಭೆಯ ದಿನಾಂಕ:13.08.2026ರವರೆಗೆ ಹಲವಾರು ಉದ್ಯೋಗದಾತರು /ಸಂಸ್ಥೆಗಳಿಂದ ಅಂದಾಜು 64 ಮನವಿಗಳು ಸ್ವೀಕೃತವಾಗಿವೆ.<br><br>ಇದಲ್ಲದೆ, ಉದ್ಯೋಗದಾತರು / ಸಂಸ್ಥೆಗಳು ದಿನಾಂಕ:22.05.2026ರ ಅಧಿಸೂಚನೆಯನ್ನು ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 16145/2026 ಮತ್ತು ಇತರ ಅರ್ಜಿಗಳಲ್ಲಿ ಪ್ರಶ್ನಿಸಿರುತ್ತಾರೆ. ಸದರಿ ರಿಟ್ ಅರ್ಜಿಗಳಿಗೆ ಸರ್ಕಾರದಿಂದ ಕಂಡಿಕೆವಾರು ಪರಾಗಳನ್ನು ಸಲ್ಲಿಸಲಾಗಿದೆ. ಪ್ರಕರಣಗಳಲ್ಲಿ ನ್ಯಾಯಾಲಯವು ಯಾವುದೇ ಮಧ್ಯಂತರ ಆದೇಶ ನೀಡಿರುವುದಿಲ್ಲ. ಪ್ರಸ್ತುತ ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇರುತ್ತವೆ. ನ್ಯಾಯಾಲಯದ ಅಂತಿಮ ತೀರ್ಪಿನನ್ವಯ ಕ್ರಮಕೈಗೊಳ್ಳಲಾಗುತ್ತದೆ. |
| ಈ | ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಪರಿಷ್ಕೃತ ಕನಿಷ್ಠ ವೇತನವನ್ನು ಜಾರಿಗೊಳಿಸಲಾಗಿದೆಯೇ; ಹೌದಾದರೆ, ಯಾವ ಯಾವ ಇಲಾಖೆಗಳು/ಸಂಸ್ಥೆಗಳಲ್ಲಿ ಜಾರಿಗೊಳಿಸಲಾಗಿದೆ ಹಾಗೂ ಜಾರಿಗೊಳಿಸದ ಇಲಾಖೆಗಳು/ಸಂಸ್ಥೆಗಳು ಯಾವುವು; ((ವಿವರ ನೀಡುವುದು). | ವಿವಿಧ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ ದಿನಾಂಕ:22-05-2026 ರಂದು ಹೊರಡಿಸಿದ ಅಧಿಸೂಚನೆಯ ವೇತನ ದರಗಳು ಎಲ್ಲಾ ಇಲಾಖೆಗಳು/ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಅನ್ವಯಿಸುತ್ತದೆ. |
| ಉ | ಪರಿಷ್ಕೃತ ಕನಿಷ್ಠ ವೇತನವನ್ನು ಜಾರಿಗೊಳಿಸುವ ಕುರಿತು ಖಾಸಗಿ ಕೈಗಾರಿಕೆಗಳು, ಉದ್ಯಮಿಗಳ ಸಂಘಟನೆಗಳು, ಗುತ್ತಿಗೆದಾರರ ಸಂಘಗಳು ಅಥವಾ ಇತರ ಖಾಸಗಿ ಸಂಘಟನೆಗಳು ಸರ್ಕಾರದ ಅಧಿಸೂಚನೆಯನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದರೆ, ಯಾವ ಯಾವ ಪ್ರಕರಣಗಳು ಯಾವ ನ್ಯಾಯಾಲಯದಲ್ಲಿ ಬಾಕಿಯಿವೆ | ಹೌದು.<br><br>ದಿನಾಂಕ:22-05-2026 ರಂದು ಹೊರಡಿಸಲಾದ ಏಕರೂಪದ ಅಧಿಸೂಚನೆಯನ್ನು ಪ್ರಶ್ನಿಸಿ ಉದ್ಯೋಗದಾತರು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಈವರೆಗೂ 24 ರಿಟ್ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಈ ಪ್ರಕರಣಗಳಲ್ಲಿ ನ್ಯಾಯಾಲಯವು ಯಾವುದೇ ಮಧ್ಯಂತರ ಆದೇಶವನ್ನು ನೀಡಿರುವುದಿಲ್ಲ. ಎಲ್ಲಾ ಪ್ರಕರಣಗಳು ಪ್ರಸ್ತುತ ವಿಚಾರಣೆ ಹಂತದಲ್ಲಿರುತ್ತವೆ.<br><br>ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳ ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |

| | | |
|---|---|---|
| | ನ್ಯಾಯಾಲಯ ನೀಡಿರುವ ಮಧ್ಯಂತರ ಅಥವಾ ಅಂತಿಮ ತೀರ್ಪು/ನಿರ್ದೇಶನಗಳೇನು? (ಮಾಹಿತಿ ನೀಡುವುದು) | |

**ಸಂಖ್ಯೆ: LD 543 LWA 2026**

**(ಸಂತೋಷ್ ಎಸ್.ಲಾಡ್)**
**ಕಾರ್ಮಿಕ ಸಚಿವರು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್. ಅರುಣ್ ಇವರ ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ: 64(735) ಉತ್ತರಿಸುವ ಬಗ್ಗೆ.**

**<u>ಅನುಬಂಧ</u>**

**ದಿನಾಂಕ: 22-05-2026 ರ ಏಕರೂಪದ ಅಂತಿಮ ಅಧಿಸೂಚನೆಯನ್ನು ಪ್ರಶ್ನಿಸಿ ಉದ್ಯೋಗದಾತರು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ ಪ್ರಕರಣಗಳ ಪಟ್ಟಿ.**

| ಕ್ರ. ಸಂ. | ಪ್ರಕರಣ ಸಂಖ್ಯೆ | ಅರ್ಜಿದಾರರ ಹೆಸರು / ಸಂಸ್ಥೆಯ ವಿವರಗಳು | ಹಂತ |
|---|---|---|---|
| 1 | WP/16145/2026 | ಕರ್ನಾಟಕ ಉದ್ಯೋಗದಾತರ ಸಂಘ, ಬೆಂಗಳೂರು | ವಿಚಾರಣೆ ಹಂತದಲ್ಲಿರುತ್ತದೆ. |
| 2 | WP/17096/2026 | ಕಾರ್ತಿಕ್ ಇಂಡಸ್ಟ್ರೀಸ್, ಕೆ.ಎಸ್.ಎಸ್.ಐ.ಡಿ.ಸಿ ಶೆಡ್‌ಗಳು, ಬೆಂಗಳೂರು | ವಿಚಾರಣೆ ಹಂತದಲ್ಲಿರುತ್ತದೆ. |
| 3 | WP/22449/2026 | ಮೆಸರ್ಸ್ ರಾಕ್ವೆಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಗೋಕಾಕ್, | ವಿಚಾರಣೆ ಹಂತದಲ್ಲಿರುತ್ತದೆ. |
| 4 | WP/19759/2026 | ಏಸ್ ಡಿಸ್ಪೆನರ್ಸ್ ಲಿಮಿಟೆಡ್, ಬೆಂಗಳೂರು. | ವಿಚಾರಣೆ ಹಂತದಲ್ಲಿರುತ್ತದೆ. |
| 5 | WP/19440/2026 | ಹೊಸಕೋಟೆ ಇಂಡಸ್ಟ್ರೀಸ್ ವೆಲ್ಫೇರ್ ಫೋರಂ, ಬೆಂಗಳೂರು | ವಿಚಾರಣೆ ಹಂತದಲ್ಲಿರುತ್ತದೆ. |
| 6 | WP/19410/2026 | ಸಂತೋಷ್ ಥಿಯೇಟರ್, ಬೆಂಗಳೂರು | ವಿಚಾರಣೆ ಹಂತದಲ್ಲಿರುತ್ತದೆ. |
| 7 | WP/19766/2026 | ಕರ್ನಾಟಕ ಇಂಡಸ್ಟ್ರೀಸ್ ಮ್ಯಾನೇಜ್ ಮೆಂಟ್ ಅಸೋಸಿಯೇಷನ್ (KINDMASS), ಬೆಂಗಳೂರು | ವಿಚಾರಣೆ ಹಂತದಲ್ಲಿರುತ್ತದೆ. |
| 8 | WP/20333/2026 | ಸಿ.ಐ.ಇ ಆಟೋಮೋಟಿವ್ ಇಂಡಿಯಾ ಲಿಮಿಟೆಡ್, ಬೆಂಗಳೂರು | ವಿಚಾರಣೆ ಹಂತದಲ್ಲಿರುತ್ತದೆ. |
| 9 | WP/24313/2026 | ಕ್ಯಾರೇಲಾನ್ ಗ್ಲೋಬಲ್ ಸೊಲ್ಯೂಷನ್ಸ್ ಇಂಡಿಯಾ ಎಲ್‌ಎಲ್‌ಪಿ, ಬೆಂಗಳೂರು. | ವಿಚಾರಣೆ ಹಂತದಲ್ಲಿರುತ್ತದೆ. |
| 10 | WP/17482/2026 | ಶಕ್ತಿ ಪ್ರೆಸಿಷನ್ ಕಾಂಪೊನೆಂಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಬೆಂಗಳೂರು | ವಿಚಾರಣೆ ಹಂತದಲ್ಲಿರುತ್ತದೆ. |

| | | | |
|---|---|---|---|
| 11 | WP/23917/2026 | ಕರ್ನಾಟಕ ಬ್ರೂವರೀಸ್ ಅಂಡ್ ಡಿಸ್ಟಿಲರೀಸ್ ಅಸೋಸಿಯೇಷನ್, ಬೆಂಗಳೂರು | ವಿಚಾರಣೆ ಹಂತದಲ್ಲಿರುತ್ತದೆ. |
| 12 | WP/19755/2026 | ಶಿವಮೊಗ್ಗ, ಭದ್ರಾವತಿ ಇಂಡಸ್ಟ್ರೀಸ್ ಅಸೋಸಿಯೇಷನ್, ಶಿವಮೊಗ್ಗ | ವಿಚಾರಣೆ ಹಂತದಲ್ಲಿರುತ್ತದೆ. |
| 13 | WP/24407/2026 | ರಿಸೋರ್ಸ್ ಪ್ರೋ ಆಪರೇಷನಲ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು | ವಿಚಾರಣೆ ಹಂತದಲ್ಲಿರುತ್ತದೆ. |
| 14 | WP/17556/2026 | ಮಾರ್ಷಲ್ ಮೋಟಾರ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು | ವಿಚಾರಣೆ ಹಂತದಲ್ಲಿರುತ್ತದೆ. |
| 15 | WP/19997/2026 | ಟೈಮ್ ಟೆಕ್ನೋಪ್ಲಾಸ್ಟ ಲಿಮಿಟೆಡ್, ಮಾಲೂರು, ಕೋಲಾರ ಜಿಲ್ಲೆ. | ವಿಚಾರಣೆ ಹಂತದಲ್ಲಿರುತ್ತದೆ. |
| 16 | WP/19437/2026 | ದೊಡ್ಡಬಳ್ಳಾಪುರ ಇಂಡಸ್ಟ್ರೀಸ್ ಅಸೋಸಿಯೇಷನ್ (DIA), ಬೆಂಗಳೂರು. | ವಿಚಾರಣೆ ಹಂತದಲ್ಲಿರುತ್ತದೆ. |
| 17 | WP/17688/2026 | ಆಟೋಮೋಟಿವ್ ಆಕ್ಸಲ್ಸ್ ಲಿಮಿಟೆಡ್ ಮ್ಯಾನೇಜ್‌ಮೆಂಟ್, ಮೈಸೂರು, | ವಿಚಾರಣೆ ಹಂತದಲ್ಲಿರುತ್ತದೆ. |
| 18 | WP/20416/2026 | ಫೆಡರೇಶನ್ ಆಫ್ ಕರ್ನಾಟಕ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (FKCCI), ಬೆಂಗಳೂರು. | ವಿಚಾರಣೆ ಹಂತದಲ್ಲಿರುತ್ತದೆ. |
| 19 | WP/19621/2026 | ಮೆಸರ್ಸ್ ಸಾಟ್ರಾಕ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು. | ವಿಚಾರಣೆ ಹಂತದಲ್ಲಿರುತ್ತದೆ. |
| 20 | WP/17583/2026 | ಫೆಡರೇಶನ್ ಆಫ್ ಆಟೋಮೊಬೈಲ್ ಡೀಲರ್ಸ್ ಅಸೋಸಿಯೇಷನ್ (FADA), ನವದೆಹಲಿ. | ವಿಚಾರಣೆ ಹಂತದಲ್ಲಿರುತ್ತದೆ. |
| 21 | WP/17689/2026 | ಹೆಲ್ತಿಯಮ್ ಮೆಡ್‌ಟೆಕ್ ಲಿಮಿಟೆಡ್ ಆಡಳಿತ ಮಂಡಳಿ, ಬೆಂಗಳೂರು | ವಿಚಾರಣೆ ಹಂತದಲ್ಲಿರುತ್ತದೆ. |
| 22 | WP/17514/2026 | ಗ್ರೇಟರ್ ಬೆಂಗಳೂರು ಉದ್ಯೋಗದಾತರ ಸಂಘ (ಆರ್), ಬೆಂಗಳೂರು | ವಿಚಾರಣೆ ಹಂತದಲ್ಲಿರುತ್ತದೆ. |

| | | | |
|---|---|---|---|
| 23 | WP/17338/2026 | ಮಾಲೂರು ಕೆ.ಐ.ಎ.ಡಿ.ಬಿ ಪ್ರದೇಶದ ಕೈಗಾರಿಕಾ ಸಂಘ, ಮಾಲೂರು, ಕೋಲಾರ | ವಿಚಾರಣೆ ಹಂತದಲ್ಲಿರುತ್ತದೆ. |
| 24 | WP/17336/2026 | ಮೆಸರ್ಸ್ ಜೆ. ಕೆ. ಟೈಯರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್, ಮೈಸೂರು. | ವಿಚಾರಣೆ ಹಂತದಲ್ಲಿರುತ್ತದೆ. |

ಆಯುಕ್ತರು
ಕಾರ್ಮಿಕ ಇಲಾಖೆ